
ಹಾಗೂ ಸ್ವಾಮೀಜಿ ಇದೇ ಭಾವದಲ್ಲಿ ವಿಶಾಲ ಭಾರತದ ಉದ್ದಗಲಕ್ಕೂ ಸಂಚರಿಸುತ್ತ, ವಾರಾಣಸಿ, ಅಯೋಧ್ಯೆ, ಹರಿದ್ವಾರ, ಋಷಿಕೇಶ ಇತ್ಯಾದಿ ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು. ಭಾರತದ ವಾಸ್ತವ ಪರಿಸ್ಥಿತಿಯನ್ನು ಅರಿಯತೊಡಗಿದರು.



ಸಂಚಾರದ ಸಮಯದಲ್ಲಿ ಅವರು ಒಮ್ಮೊಮ್ಮೆ ಬಡವರ ಗುಡಿಸಿಲಿನಲ್ಲಿ, ಕೆಲವೊಮ್ಮೆ ಮಧ್ಯಮವರ್ಗದ ಜನರ ಮನೆಗಳಲ್ಲಿ, ಅಪರೂಪಕ್ಕೆ ರಾಜಮಹಾರಾಜರುಗಳ ಅರಮನೆಗಳಲ್ಲಿ, ಆಗಾಗ ಮರಗಳ ಆಶ್ರಯದಲ್ಲಿ ಕೂಡ ತಂಗುವ ಸಂದರ್ಭಗಳು ಒದಗಿಬರುತ್ತಿದ್ದವು. ಈ ಮೂಲಕ ತಾಯ್ನಾಡಿನ ನೈಜ ಜೀವನದರ್ಶನವನ್ನು ಸ್ವಾಮಿ ವಿವೇಕಾನಂದರು ಸ್ಪಷ್ಟವಾಗಿ ಕಂಡರು. ಈ ಮೂಲಕ ದೀನದರಿದ್ರರ ಬಡತನದ ಬೇಗೆಯ ಅರಿವೂ ಅವರಿಗೆ ಆಯಿತು.